ಅಧ್ಯಕ್ಷರು:– ಕೆಲವು ಮಾರ್ಗಗಳು ಇವೆ. ಯಾವ ರೀತಿ ಕೇಳಬೇಕು? ಎಲ್ಲಿ ಕೇಳಬೇಕು, ಯಾವುದನ್ನು ಕೇಳಬೇಕು ಎಂದು ಕೆಲವು ಮಾರ್ಗಗಳು ಇವೆ; ರೂಲ್ಸ್‌ಗಳು ಇವೆ.

ಶ್ರೀ ಆರಗ ಜ್ಞಾನೇಂದ್ರ:– ಆವರ ಮಾರ್ಗದಲ್ಲೇ ಅವರು ಹೋಗಿದ್ದಾರೆ.

(ಗೊಂದಲ)

ಅಧ್ಯಕ್ಷರು:– ನಮ್ಮ ಮುಂದೆ ಇರುವುದು, ಶೂನ್ಯವೇಳೆಯಲ್ಲಿ ಸಬ್ ಜ್ಯುಡೀಸ್ ಆಗತಕ್ಕ ವಿಷಯವನ್ನು ಡಿಸ್‌ಕಸ್ ಮಾಡಬಹುದೇ ಇಲ್ಲವೇ ಎಂಬುದೇ ಪ್ರಶ್ನೆ, ಬೇರೆ ಮಾರ್ಗಗಳು ಇರುವಾಗ ಇಲ್ಲಿ ಏಕೆ ಮಾಡುತ್ತೀರಿ ಎಂದು. ಇದಕ್ಕೆ ನನಗೆ ಸ್ವಲ್ಪ ಸಮಯ ಬೇಕು. ಇದರ ಬಗ್ಗೆ ವಿಷಯಗಳನ್ನೆಲ್ಲಾ ಕೂಲಂಕಷವಾಗಿ ನೋಡಬೇಕು; ಪುಸ್ತಕಗಳನ್ನು ರೆಫರ್ ಮಾಡಬೇಕು. ಸೋಮವಾರ ಅಥವಾ ಮಂಗಳವಾರ ಇದ ಬಗ್ಗೆ ರೂಲಿಂಗ್ ಕೊಡುತ್ತೇನೆ. ಅದರ ಮುಂದೆ ನೋಡಿಕೊಳ್ಳೋಣ, ಆ ಸಬ್ಜೆಕ್ಟ್ ಈಗ ಬೇಡಿ.

- (2) ವಿಷಯ: ಬೆಳಗಾಂ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆ ರೈತರಿಗೆ ಕಬ್ಬಿನ ಹಣ ಪಾವತಿ ಮಾಡದೇ ಇರುವ ಬಗ್ಗೆ:-

ಶ್ರೀ ಮಹದೇವ್ ಕೌಜಲಗಿ (ಬೈಲಹೊಂಗಲ):– ಸನ್ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆ ರಾಜ್ಯದಲ್ಲೇ ಒಂದು ಅತಿ ಹೆಚ್ಚಿನ ಸಕ್ಕರೆಯ ಉತ್ಪಾದನೆ ಮಾಡುವಂಥ ಜಿಲ್ಲೆ. ಕಳೆದ ಕೆಲವು ವರ್ಷಗಳಿಂದ ಅನೇಕ ಸಕ್ಕರೆ ಕಾರ್ಖಾನೆಗಳಲ್ಲಿ, ರೈತರು ಬೆಳೆದಂಥ ಬೆಳೆಗೆ ಆಲ್ಲಿಯ ಕಾರ್ಖಾನೆಯವರು ಬಿಲ್ಲನ್ನು ಕೊಡದೇ ಇರುವುದರಿಂದ ನಮ್ಮ ಭಾಗದ ರೈತರು ಬಹಳ ತೊಂದರೆಯಲ್ಲಿ ಸಿಲುಕಿದ್ದಾರೆ. ಬೆಳಗಾಂ ಜಿಲ್ಲೆ ಖಾನಾಪುರ ತಾಲ್ಲೂಕಿನ ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆಯವರು ಕಳೆದ ಒಂದು ವರ್ಷದಿಂದ ರೈತರಿಗೆ ಯಾವುದೇ ರೀತಿಯಾದಂಥ ಪೇಮೆಂಟನ್ನು ಮಾಡುತ್ತಾ ಇಲ್ಲ. ಸುಮಾರು 8 ಕೋಟಿ ರೂಪಾಯಿಗಳ ಬಾಕಿಯನ್ನು ರೈತರಿಗೆ ಕೊಡಬೇಕಾಗಿದೆ. ರೈತರು 11 ತಿಂಗಳವರೆಗೆ ಅತ್ಯಂತ ಕಷ್ಟದಿಂದ ಕಬ್ಬನ್ನು ಬೆಳೆದು ಕಾರ್ಖಾನೆಗೆ ಕೊಟ್ಟರೆ, ಕಾರ್ಖಾನೆಯವರು ಅವರಿಗೆ ಹಣ ಪಾವತಿ ಮಾಡದೇ ಇರುವುದರಿಂದ ಅನೇಕ ರೀತಿಯಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರಲ್ಲಿಯೂ ಈ ಬಾರಿ ಬರಗಾಲ; ಮೊದಲೇ ಅವರು ಸಂಕಷ್ಟದಲ್ಲಿದ್ದಾರೆ. ಮತ್ತೆ ಆ ಫ್ಯಾಕ್ಟರಿಯವರು ಹಣವನ್ನು ಕೊಡದೇ ಇರುವುದರಿಂದ ಅವರು ಮತ್ತಷ್ಟು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಉಳಿಸಿ ಎಂದು ಆ ಭಾಗದ ರೈತರು ಹಾಗೂ ಅಲ್ಲಿದ್ದಂಥ ಕಾರ್ಮಿಕರು ದಿನಾಂಕ: 15 ರಂದು ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕತಕ್ಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಅದಕ್ಕೆ ನಾನು, ಈ ಸಂದರ್ಭದಲ್ಲಿ ಸರ್ಕಾರದವರು ಮಧ್ಯ ಪ್ರವೇಶಿಸಿ ಅಲ್ಲಿ ರೈತರಿಗೆ ಆಗುತ್ತಿರುವಂಥ ತೊಂದರೆಯನ್ನು ಹೋಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕೇವಲ ರೈತರ ಬಾಕಿಯನ್ನಷ್ಟೇ ಕೊಡುತ್ತಾ ಇಲ್ಲ, ಸುಮಾರು 5 ತಿಂಗಳಿಂದ ಆ ಕಾರ್ಖಾನೆಯಲ್ಲಿ ಯಾರು ಕೆಲಸವನ್ನು ಮಾಡುತ್ತಿದ್ದಾರೆ, ಆ ಕಾರ್ಮಿಕರಿಗೂ ಸಹಿತ ಹಣವನ್ನು ಕೊಟ್ಟಿಲ್ಲ. ಈ ಸಕ್ಕರೆ ಕಾರ್ಖಾನೆ ಕೇವಲ 5 ವರ್ಷಗಳ ಹಿಂದೆ ಪ್ರಾರಂಭವಾದದ್ದು. ಇಲ್ಲಿಯವರೆಗೆ ಯಾವುದೇ ತೊಂದರೆಗಳು ಇಲ್ಲದೇ ಇದ್ದರೂ ಸಹಿತ, ಈ ವರ್ಷ ಈ ಸಕ್ಕರೆ ಕಾರ್ಖಾನೆ ಸುಮಾರು 14 ಕೋಟಿ ರೂಪಾಯಿಗಳ ಬಾಕಿ ಕೊಡಬೇಕಾಗಿದೆ.

ಅದಕ್ಕೆ ಮುಂದೆ ಏನು ಅನಾಹುತವಾಗುತ್ತಾ ಇದೆ, ಆ ಅನಾಹುತವನ್ನು ತಪ್ಪಿಸಲು ಕೂಡಲೇ ಮಧ್ಯೆ ಪ್ರವೇಶಿಸಿ, ರೈತರಿಗೆ ಏನು ಹಣವನ್ನು ಕೊಡಬೇಕಾಗಿದೆಯೋ ಆ ಹಣವನ್ನು ಕೊಡುವಂಥ ಏರ್ಪಾಡನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎ.ಬಿ. ಪಾಟೀಲ್ (ಸಂಕೇಶ್ವರ):- ಮಾನ್ಯ ಅಧ್ಯಕ್ಷರೇ, ಮಾನ್ಯ ಮಹಾಂತೇಶ್ ಕೌಜಲಗಿಯವರು ಹೇಳಿದಹಾಗೆ ಬೆಳಗಾಂ ಜಿಲ್ಲೆ ಸಕ್ಕರೆ ಉದ್ಯಮಕ್ಕೆ ಹೆಸರಾದಂಥ ಜಿಲ್ಲೆ. ಕೇವಲ 4-5 ವರ್ಷಗಳ ಹಿಂದೆ ಪ್ರಾರಂಭವಾದಂಥ ಖಾನಾಪುರ ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆ, ಇದು ಎರಡು ವರ್ಷದೊಳಗಾಗಿ ಈ ಪರಿಸ್ಥಿತಿಗೆ ಬಂದಿದೆ. ಮೊದಲೇನೂ ಈ ಪರಿಸ್ಥಿತಿ ಇರಲಿಲ್ಲ. ಒಂದು ವರ್ಷದಿಂದ ರೈತರು ಬೆಳೆದ ಕಬ್ಬಿನ ಬೆಳೆಗೆ ಸುಮಾರು 8 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲ. ಸುಮಾರು 6 ತಿಂಗಳಿಂದ ಅಲ್ಲಿನ ನೌಕರರಿಗೆ ಪಗಾರವನ್ನೇ ಕೊಟ್ಟಿಲ್ಲ. ಈ ಒಂದು ಪರಿಸ್ಥಿತಿಗೆ ಬರಲಿಕ್ಕೆ ಏನು ಕಾರಣ? ಬಹಳಷ್ಟು ರೈತರು ಕೂಡಿ ಇವತ್ತು ಭಾಗ್ಯಲಕ್ಷ್ಮಿ ಸಕ್ಕರೆ ಕಾರ್ಖಾನೆ ಬಚಾವ್, ಇದನ್ನು ಉಳಿಸಿ ಎಂಬ ಘೋಷಣೆಯನ್ನು ಪ್ರಾರಂಭ ಮಾಡಿದ್ದಾರೆ. ಇಡೀ ಬೆಳಗಾಂ ಜಿಲ್ಲೆಯಲ್ಲಿ ಅಲ್ಲ, ಇಡೀ ರಾಜ್ಯದಲ್ಲಿ ಅತಿ ಉತ್ತಮವಾದಂಥ ಕಬ್ಬು ಬೆಳೆಯುವಂಥ ಕ್ಷೇತ್ರ ಅಥವಾ ಏರಿಯಾ ಎಂದರೆ ಖಾನಾಪುರ ತಾಲ್ಲೂಕು. ಆದರೆ, ಇವತ್ತು ಅಲ್ಲಿಯ ರೈತರು ಈ ಪರಿಸ್ಥಿತಿಯಲ್ಲಿದ್ದಾರೆ. ಯಾವ ರೀತಿಯ ಸಂಕಷ್ಟಕ್ಕೆ ಸಿಕ್ಕಿದ್ದಾರೆ, ಇದರಲ್ಲಿ ಏನು ಅವ್ಯವಹಾರವಾಗಿದೆ, ಇದಕ್ಕೆ ಯಾರು ಕಾರಣ, ಸರ್ಕಾರ ಏನು ಮಾಡುತ್ತಾ ಇದೆ? ಇದರ ಬಗ್ಗೆ ವಿವರಗಳನ್ನು ಕೊಡಬೇಕು ಮತ್ತು ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ):- ಮಾನ್ಯ ಅಧ್ಯಕ್ಷರೇ, ಕೊಪ್ಪಳ ಜಿಲ್ಲೆಯ ಗಂಗಾವತಿ ಕಾರ್ಖಾನೆಯಲ್ಲಿ ಮಹಾಂತೇಶ್ ರವರು ಹೇಳಿದಹಾಗೆ ರೈತರಿಗೆ 8 ತಿಂಗಳಿಂದ ಪೇಮೆಂಟ್ ಆಗಿಲ್ಲ. ಅಲ್ಲಿಯ ಕಾರ್ಮಿಕರಿಗೂ ಸಂಬಳವನ್ನು ಕೊಟ್ಟಿಲ್ಲ. ಹೀಗಾಗಿ ಅಲ್ಲಿನ ರೈತರು 2-3 ಸಾವಿರ ಕಬ್ಬಿನ ಹಣವನ್ನು ಪಾವತಿ ಮಾಡಬೇಕೆಂದು ಜಿಲ್ಲಾಧಿಕಾರಿಗಳ ಕಛೇರಿ ಎದುರುಗಡೆ ಚಳುವಳಿ ಮಾಡಿದ್ದಾರೆ. ಇದರಿಂದ ಮುಂದಿನ ಬೆಳೆಯನ್ನು ತೆಗೆಯಲು ರೈತರಿಗೆ ತುಂಬಾ ತೊಂದರೆ ಇದೆ. ಹೋದಸಾರಿ ಕೂಡ ತಮಗೆ ಗೊತ್ತಿದ್ದಹಾಗೆ ರಾಜ್ಯದಲ್ಲಿ ಬರಗಾಲ ಎದುರಿಸಿದ್ದೇವೆ. ಅಲ್ಲಿ ಸಕ್ಕರೆ ದಾಸ್ತಾನು ಸಾಕಷ್ಟು ಇದೆ. ಕೇಂದ್ರ ಸರ್ಕಾರದ ಸೇಲ್ ಪರ್ಮಿಟ್ಟಿಗೆ, ಅವರು ಕೊಟ್ಟಷ್ಟು ಕೋಟಾವನ್ನು ಸೇಲ್ ಮಾಡಿದ ಮೇಲೆ ಅವರು ಪೇಮೆಂಟ್ ಮಾಡಬೇಕಾದರೆ, ರೈತರ ಸಮಸ್ಯೆಯನ್ನು ಬಗೆಹರಿಸತಕ್ಕಂಥ ವಿಚಾರಕ್ಕೆ ಸರ್ಕಾರ ಬರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಜಿಲ್ಲಾ ಮಂತ್ರಿಗಳೂ ಕೂಡ ಒಂದು ಸಭೆಯನ್ನು ಮಾಡಿದರು. ಅದರಿಂದ ಏನೂ ಕ್ರಮ ಆಗಿಲ್ಲ. ಹೀಗಾಗಿ ರೈತರು ಪ್ರೊಟೆಸ್ಟ್ ಮಾಡುತ್ತೇವೆಂದು ಕರೆ ಕೊಟ್ಟಿದ್ದಾರೆ. ಇವತ್ತು ಸಕ್ಕರೆ ಮಂತ್ರಿಗಳು ಇಲ್ಲಿ ಕಾಣಿಸುತ್ತಾ ಇಲ್ಲ. ಹಿರಿಯ ಮಂತ್ರಿಗಳು ಇದ್ದಾರೆ. ಇವತ್ತು ಆ ಕಾರ್ಖಾನೆಯನ್ನು ಮಾರಾಟ ಮಾಡತಕ್ಕ ವಿಚಾರವನ್ನು ಕೂಡ ಸರ್ಕಾರ ಮಾಡುತ್ತಿದೆ. ಅದು ಇಡೀ ಏಷ್ಯಾ ಖಂಡಗಲ್ಲೇ ದೊಡ್ಡ ಫ್ಯಾಕ್ಟರಿ. ಈ ಗಂಗಾವತಿ ಫ್ಯಾಕ್ಟರಿಯನ್ನು ಅಲ್ಲಿಯೇ ಉಳಿಸಬೇಕೆಂದು ನಾವು ಒತ್ತಾಯ ಮಾಡುತ್ತೇವೆ ಇದನ್ನು ಖಾಸಗೀಕರಣ ಮಾಡುವುದು ಅಥವಾ ಮಾರಾಟ ಮಾಡುವುದರ ಬಗ್ಗೆ ಸರ್ಕಾರದವರು ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಈಗ ತೀವ್ರಗತಿಯಿಂದ

ರೈತರಿಗೆ ಪೇಮೆಂಟ್ ಮಾಡಬೇಕು. ಸೇಲ್ ಮಾಡಿಯೇ ಕೊಡಬೇಕೆಂದರೆ ಆಗುವುದಿಲ್ಲ. ರೈತರು ಉಳಿಯುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಬೇರೆ ರೂಪದಿಂದ ಅಲ್ಲಿ ಸಂಧಾನ ಮಾಡಿ ಕೊಡತಕ್ಕ ವ್ಯವಸ್ಥೆ ಮಾಡಿದರೆ, ರೈತರನ್ನು ಉಳಿಸುವುದಕ್ಕೆ ಸಾಧ್ಯವಿದೆ. ಇದಕ್ಕೆ ಅವರಿಂದ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ.

12.30 ಪಿ.ಎಂ.

ಶ್ರೀ ರಮೇಶ್ ಕುಮಾರ್ ಪಾಂಡೆ (ಬೀದರ್):- ಮೊನ್ನೆ ಬರಗಾಲ ಪರಿಸ್ಥಿತಿಯ ಮೇಲೆ ಮಾತನಾಡುವಾಗ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಬಗ್ಗೆ ಸವಿಸ್ತಾರವಾಗಿ ನಾನು ಮಾತನಾಡಿದ್ದೇನೆ. ಕೃಷಿ ಮಂತ್ರಿಯವರಾಗಲಿ, ಕಂದಾಯ ಸಚಿವರಾಗಲೀ ಅದಕ್ಕೆ ಉತ್ತರವನ್ನು ಕೊಟ್ಟಿಲ್ಲ. ಬೀದರ್ ಸಕ್ಕರೆ ಕಾರ್ಖಾನೆಯವರು ಸುಮಾರು ಒಂಬತ್ತು ಕೋಟಿ ರೂಪಾಯಿಗಳನ್ನು ರೈತರಿಗೆ ಕೊಡಬೇಕು. ಮೊನ್ನೆ ನಾನು ವರ್ಷಾವಾರು ಪ್ರಸ್ತಾಪವನ್ನು ಮೊನ್ನೆ ಸದನದಲ್ಲಿ ಮಾಡಿದ್ದೇನೆ. ಆದರೆ ಅದಕ್ಕೆ ಉತ್ತರ ಇನ್ನೂ ಬಂದಿಲ್ಲ. ನಾವು ನಮ್ಮ ಕ್ಷೇತ್ರಕ್ಕೆ ಹೋದಾಗ ರೈತರು ಏನಾಯಿತು ಎಂದು ಕೇಳುತ್ತಾರೆ. ಆದ್ದರಿಂದ ರೈತರಿಗೆ ಸರಕಾರದವರು ಒಂದು ಸೂಕ್ತ ವ್ಯವಸ್ಥೆಯನ್ನು ಮಾಡಿ ಆ ಮೂಲಕ ರೈತರಿಗೆ ಒಂದು ಭರವಸೆಯನ್ನು ಕೊಡಬೇಕು ಎಂದು ತಮ್ಮ ಮೂಲಕ ನಾನು ವಿಜ್ಞಾಪಿಸಿಕೊಳ್ಳುತ್ತೇನೆ.

ಅಧ್ಯಕ್ಷರು:- ಜೀರೋ ಹವರ್‌ನಲ್ಲಿ ಮಾನ್ಯ ಸದಸ್ಯರು ವಿಷಯ ಪ್ರಸ್ತಾಪ ಮಾಡಿದರೆ ಅದಕ್ಕೆ ಸಂಬಂಧಪಟ್ಟ ಸಚಿವರು ಉತ್ತರ ಕೊಡಬೇಕೆಂಬ ಕಂಪಲ್‌ಷನ್ ಇಲ್ಲ. ನೀವು ಸರಕಾರದ ಗಮನಕ್ಕೆ ವಿಷಯವನ್ನು ತರಬಹುದು ಅಷ್ಟೆ. ಅದಕ್ಕೆ ಉತ್ತರವನ್ನು ಮಂತ್ರಿಯವರೇ ಕೊಡಬೇಕೆಂದು ಇಲ್ಲ. ನಾನು ಹೇಳುವುದೇನೆಂದರೆ, ರೂಲ್ಸ್‌ನಲ್ಲಿ ಹೀಗೆ ರಿಪ್ಲೈ ಮಾಡಬೇಕೆಂದು ಎಲ್ಲಿಯೂ ಇಲ್ಲ. ನೀವು ಸುಮ್ಮನೆ ಸರಕಾರದ ಗಮನಕ್ಕೆ ತರಬಹುದು ಅಷ್ಟೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:- ಮಾನ್ಯ ಅಧ್ಯಕ್ಷರೇ, ತಾವೇ ಹೀಗೆ ಹೇಳಿದರೆ ಹೇಗೆ? ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ಮೇಲೆ ಅದಕ್ಕೆ ಒಂದು ಉತ್ತರ ಬೇಡವೇ?

(ಗೊಂದಲ)

ಅಧ್ಯಕ್ಷರು:- ವಿಷಯ ಪ್ರಸ್ತಾಪ ಮಾಡಿದ್ದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಹೇಳಬೇಕು. ದಯವಿಟ್ಟು ಕೇಳಿ. ಆದರೆ ಜೀರೋ ಹವರ್‌ನಲ್ಲಿ ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಕೊಡಲೇಬೇಕೆಂದು ನಮ್ಮ ರೂಲ್ಸ್‌ನಲ್ಲಿಲ್ಲ. ಅದಕ್ಕೋಸ್ಕರ ನಾವು ಏನೋ ಕನ್‌ವೆನ್‌ಷನ್‌ನಲ್ಲಿ ನೀವು ಕಳುಹಿಸಿದ ವಿಷಯಕ್ಕೆ ಅವರು ಉತ್ತರವನ್ನು ಕೊಡುತ್ತೇವೆಂದು ಹೇಳಿದರೆ ನಾವು ಒಪ್ಪಿ ಉತ್ತರಿಸಲು ಅವಕಾಶ ಕೊಡುತ್ತೇವೆ. ಆದ್ದರಿಂದ ತಾವುಗಳು ಆ ಬಗ್ಗೆ ಕಂಪೆಲ್ ಮಾಡಬಾರದು. ಇನ್ನು ಕೆಲವು ಮಾನ್ಯ ಸದಸ್ಯರು ಸರಕಾರದ ಗಮನಕ್ಕೆ ವಿಷಯವನ್ನು ತರುತ್ತೇವೆ, ನಮಗೆ ಉತ್ತರ ಬೇಕಾಗಿಲ್ಲ ಎಂದು ಕೂಡ ಹೇಳುತ್ತಾರೆ. ಕೆಲವರು ಉತ್ತರ ಬೇಕು ಎಂದು ಹೇಳುತ್ತಾರೆ ನಾವು ಯಾವುದೊಂದು ಹೇಳೋಣ? ಮಾನ್ಯ ಮಂತ್ರಿಗಳಿಗೆ ವಿಷಯ ಕಳುಹಿಸಿದ್ದು

ಅವರಿಂದ ಉತ್ತರ ಕೊಡಿಸುತ್ತೇವೆ ಎಂದು ಹೇಳಿದರೆ ಅದಕ್ಕೆ ಅರ್ಜೆಂಟ್ ಆಗಿ ಉತ್ತರ ಬೇಕೆಂದು ಹೇಳುತ್ತೀರಿ. ಹೀಗೆ ಇರುವಾಗ ನಾವು ಯಾವುದನ್ನು ಪರಿಗಣಿಸಬೇಕು?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ:– ತಾವುಗಳು ಸರಕಾರಕ್ಕೆ ಹೇಳಿ ಉತ್ತರ ಕೊಡಿ ಎಂದು ದಯವಿಟ್ಟು ಹೇಳುವುದನ್ನು ಬಿಟ್ಟು ನಮಗೆ ನೀವು ಹೇಳಿದ್ದೀರಿ ಅವರು ಆ ಕುರಿತು ಗಮನಹರಿಸಿದ್ದಾರೆ ಅಂದರೆ ಹೇಗೆ? ರಾಜ್ಯದಲ್ಲಿನ ಸುಮಾರು 7-8 ಸಕ್ಕರೆ ಕಾರ್ಖಾನೆಗಳಲ್ಲಿ ರೈತರಿಗೆ ಹಣ ಸಂದಾಯವಾಗಿಲ್ಲ. ರೈತರು ಸಂಕಷ್ಟದಲ್ಲಿದ್ದಾರೆ. ಸರಕಾರದವರು ಯಾವ ರೀತಿಯಲ್ಲಿ ಗಮನಹರಿಸಿದ್ದಾರೆ ಎಂದು ಹೇಳಲಿ...

(ಗೊಂದಲ)

ಅಧ್ಯಕ್ಷರು:– ನಾನು ಮೊನ್ನೆ ಮಾನ್ಯ ಮಂತ್ರಿಗಳು ಉತ್ತರ ಕೊಡಲು ತಯಾರಾದ ಮೇಲೆ ನೀವು ಪ್ರಸ್ತಾಪ ಮಾಡಿ ಎಂದು ಹೇಳಿದ್ದೆ. ಅವರು ಉತ್ತರ ಕೊಡದೇ ಇದ್ದರೆ ನಾನೇನು ಮಾಡಲಿ?

(ಗೊಂದಲ)

ಸಕ್ಕರೆ ಮಂತ್ರಿಗಳು ಸದನದಲ್ಲಿ ಕಾಣಿಸುತ್ತಾ ಇಲ್ಲ. ಅದಕ್ಕೋಸ್ಕರ ನಾನು ಹೇಳಿದ್ದು...

ಶ್ರೀ ಎನ್. ಚಿಲುವರಾಯಸ್ವಾಮಿ:– ಸರಕಾರದ ಗಮನಕ್ಕೆ ವಿಷಯವನ್ನು ತನ್ನಿ ಎಂದು ಹೇಳಿದ್ದೀರಿ. ಗಮನಕ್ಕೆ ತಂದಿದ್ದೇವೆ. ಮಾನ್ಯ ಸಚಿವರು ಉತ್ತರ ಕೊಡಲಿ...

ಶ್ರೀ ಕೆ.ಬಿ. ಮಲ್ಲಿಕಾರ್ಜುನ:– ಮಾನ್ಯ ಅಧ್ಯಕ್ಷರೇ, ನನ್ನದು ಒಂದು ಕ್ರಿಯಾಲೋಪ ಇದೆ. ತಾವುಗಳು ಜೀರ್‌ನಲ್ಲಿ ಕುಳಿತು ಹೇಳಿದ್ದನ್ನು ನಾವೆಲ್ಲರೂ ಗಮನಿಸಿದ್ದೇವೆ. ಕ್ವೊಶ್ಚನ್ ಹವರ್ ಒಂದು ಬಿಟ್ಟು ಬಾಕಿ ಸಮಯದಲ್ಲಿ ಕ್ರಿಯಾಲೋಪ ಎತ್ತುವುದಕ್ಕೆ ರಿಸ್ಟ್ರಿಕ್ಷನ್ ಇಲ್ಲ.

ಅಧ್ಯಕ್ಷರು:– ಜೀರೋ ಹವರ್‌ನಲ್ಲಿ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ. ಶೂನ್ಯವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಎಲ್ಲಿದೆ? ಇರುವುದೇ ಶೂನ್ಯವೇಳೆ ಅಲ್ಲವೇ?

ಶ್ರೀ ಎ. ರಾಮದಾಸ್:– ನಿನ್ನೆ ಮಾನ್ಯ ಕಾನೂನು ಮಂತ್ರಿಗಳು ಪಾಯಿಂಟ್ ಆಫ್ ಆರ್ಡರ್ ಮೇಲೆ ಜೀರೋ ಹವರ್‌ನಲ್ಲಿ ಬಹಳ ಉದ್ದುದ್ದವಾಗಿ ಹೇಳಿದ್ದಾರೆ.

(ಗೊಂದಲ)

ಅಧ್ಯಕ್ಷರು:– ವಿಷಯ ಪ್ರಸ್ತಾಪ ಕೂಡಲೇ ಮಾಡಬೇಕೆಂದು ಹೇಳುತ್ತಾರೆ. ಕೆಲವರು ಉತ್ತರ ಬೇಕು ಎಂದು ಹೇಳಿದರೆ, ಕೆಲವರು ಬೇಡ ಎಂದು ಹೇಳುತ್ತಾರೆ. ನಾವು ಯಾವುದನ್ನು ಕೇಳೋಣ? ಉತ್ತರ ಹೇಳಲೇಬೇಕೆಂದು ರೂಲ್ಸ್‌ನಲ್ಲಿ ಇಲ್ಲ ...

ಶ್ರೀ ಕೆ.ಬಿ. ಮಲ್ಲಿಕಾರ್ಜುನ:– ಮಾನ್ಯ ಅಧ್ಯಕ್ಷರೇ, ನಿನ್ನೆ ಮಾನ್ಯ ಕಾನೂನು ಸಚಿವರು ಜೀರೋ ಹವರ್‌ನಲ್ಲಿ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದರು. ತಾವು ಇವೊತ್ತು ಅದಕ್ಕೆ ರೂಲಿಂಗ್ ಕೊಡುತ್ತಾ ಇದ್ದೀರಿ. ನಾನು ಇವೊತ್ತು ಜೀರೋ ಹವರ್‌ನಲ್ಲಿ ಪಾಯಿಂಟ್ ಆಫ್

ಆರ್ಡರ್‌ನ್ನು ಎತ್ತಿದರೆ ಜೀರೋ ಹವರ್‌ನಲ್ಲಿ ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಲು ಆಗುವುದಿಲ್ಲವೆಂದು ತಾವುಗಳು ಹೇಳುತ್ತೀರಿ. ತಾವುಗಳು ಇದೇ ರೂಲಿಂಗ್ ಕೊಟ್ಟು ಬಿಡಿ. ನಾವು ಆ ರೂಲಿಂಗ್‌ನ್ನು ಒಪ್ಪಿಕೊಂಡು ಕುಳಿತುಕೊಳ್ಳುತ್ತೇವೆ. ನಮಗೆ ತಮ್ಮ ರೂಲಿಂಗ್ ಬೇಕು. ಜೀರೋ ಹವರ್‌ನಲ್ಲಿ ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಲು ಅವಕಾಶವಿಲ್ಲವೆಂದು ತಾವುಗಳು ರೂಲಿಂಗ್‌ನ್ನು ಕೊಟ್ಟರೆ ನಿನ್ನೆಯ ತಮ್ಮ ರೂಲಿಂಗನ್ನು ತಾವು ಇವೊತ್ತು ಕ್ವೊಶ್ಚನ್ ಮಾಡಬೇಕಾಗುತ್ತದೆ. ನಿನ್ನೆ ಸಂಸದೀಯ ವ್ಯವಹಾರಗಳ ಸಚಿವರು ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿದ್ದ ಹಾಗೆ ತಾವುಗಳು ರೂಲಿಂಗ್ ಕೊಡುವುದಕ್ಕೆ ತಯಾರಾಗಿದ್ದೀರಿ. ಅದಕ್ಕೆ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಜೀರೋ ಹವರ್‌ನಲ್ಲಿ ತಾವುಗಳು ಒಂದು ಮಾತನ್ನು ಹೇಳಿದ್ದೀರಿ. ಜೀರೋ ಹವರ್‌ನಲ್ಲಿ ಗಮನಕ್ಕೆ ತರತಕ್ಕಂಥಾದ್ದು ವಿಷಯ ಇಲ್ಲ. ಯಾರೂ ಉತ್ತರ ಹೇಳುವ ಹಾಗಿಲ್ಲ, ವಿಷಯವನ್ನು ಸರಕಾರದ ಗಮನಕ್ಕೆ ತರುತ್ತೇವೆ. ಅವರು ನೋಟ್ ಮಾಡಿಕೊಳ್ಳುತ್ತಾರೆ. ಉತ್ತರ ಹೇಳಬಹುದು, ಬೇಕಾದರೆ ಬಿಡಬಹುದು. ಹಾಗಾದರೆ ತಾವು ಜೀರೋ ಹವರ್‌ನ್ನು ಸಸ್ಪೆಂಡ್ ಮಾಡಬಹುದಲ್ಲವೇ?

ಅಧ್ಯಕ್ಷರು:- ಕನ್‌ವೆನ್‌ಷನ್ ಮೂಲಕ ನಾವು ಬಹಳ ಪ್ರಾಮುಖ್ಯವಾದ ವಿಷಯಗಳನ್ನು ತೆಗೆದಕೊಂಡು ಅತಿ ಜರ್ರೂರಾದ ವಿಷಯಗಳನ್ನು ತೆಗೆದುಕೊಂಡು ಪ್ರಸ್ತಾಪ ಮಾಡುವುದು ಮೊದಲಿಂದಲೂ ನಡೆದುಕೊಂಡು ಬಂದಿದೆ. ಅದನ್ನು ಸಸ್ಪೆಂಡ್ ಮಾಡೋಣ ಅಂದರೆ ಮಾಡೋಣ ಬಿಡಿ ....

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಮಾನ್ಯ ಅಧ್ಯಕ್ಷರೇ, ನಾನು ಸರಕಾರದ ಮುಖ್ಯ ಸಚೇತಕನಾಗಿ ಕೂಡ ಕೆಲಸ ಮಾಡಿದ್ದೇನೆ. ಇಲ್ಲಿ ನಮ್ಮ ಹಿರಿಯ ಸಚಿವರೂ ಕೂಡ ಉಪಸ್ಥಿತರಿದ್ದಾರೆ. ಜೀರೊ ಹವರನಲ್ಲಿ ಯಾವ ವಿಷಯವನ್ನು ಪ್ರಸ್ತಾಪ ಮಾಡುತ್ತಾರೆ ಅದನ್ನು ಸರಕಾರದ ಮುಖ್ಯ ಸಚೇತಕರು ನೋಟ್ ಮಾಡಿಕೊಂಡು ಒಂದೆರಡು ದಿನಗಳಲ್ಲಿ ಅದಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ದೊರಕಿಸಿಕೊಡತಕ್ಕಂಥಾದ್ದು ಮಾನ್ಯ ಹಿರಿಯ ಸಚಿವರು ನಮಗೆ ಕಲಿಸಿರತಕ್ಕಂಥ ಪಾಠ. ಮಾನ್ಯ ಹೆಚ್.ಕೆ. ಪಾಟೀಲರವರು ನಮಗೆ ಇದನ್ನು ಕಲಿಸಿರತಕ್ಕಂಥಾದ್ದು. ಅದನ್ನು ನಾನು ಹೇಳುತ್ತಾ ಇದ್ದೇನೆ. ತಮ್ಮ ಮೂಲಕ ನಾನು ಅದನ್ನು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಅವರಿಗೂ ಹೇಳುತ್ತಾ ಇದ್ದೇನೆ. ನಾವು ಸದನದಲ್ಲಿ ಜೀರೋ ಹವರ್‌ನಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಒಂದೋ ಎರಡೋ ದಿನಗಳಲ್ಲಿ ಉತ್ತರವನ್ನು ಕೊಡಿಸದೇ ಹೋದರೆ ಜೀರೋ ಹವರ್ ಒಂದು ರೀತಿಯಲ್ಲಿ ಶೂನ್ಯವಾಗಿ ಹೋಗುತ್ತದೆ. ಆ ಬಗ್ಗೆ ತಾವುಗಳು ತಮ್ಮ ರೂಲಿಂಗ್‌ನ್ನು ಕೊಟ್ಟರೆ ಅದನ್ನು ನಾವು ಒಪ್ಪುತ್ತೇವೆ.

ಅಧ್ಯಕ್ಷರು:- ರೂಲಿಂಗ್‌ನ್ನು ನಾನು ಸೋಮವಾರ ಅಥವಾ ಮಂಗಳವಾರ ಕೊಡುತ್ತೇನೆ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ (ಅಣ್ಣಯ್ಯ):- ಮಾನ್ಯ ಅಧ್ಯಕ್ಷರೇ ...

ಅಧ್ಯಕ್ಷರು:- ತಮ್ಮ ಕಡೆ ಶುಗರ್ ಫ್ಯಾಕ್ಟರೀಸ್ ಇವೆಯೇ? ಅಲ್ಲಿ ಹಣ ಬಾಕಿ ಕೊಡುವುದು ಇದೆಯೇ? ಹಾಗೇನಾದರೂ ಇದ್ದರೆ ಹೇಳಬಹುದು.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ:- ಮಾನ್ಯ ಅಧ್ಯಕ್ಷರೇ, ನಮಗೆ ತಮ್ಮ ಬಗ್ಗೆ ಅಪಾರವಾದಂಥ ಗೌರವವಿದೆ. ತಾವುಗಳು ವಿರೋಧಪಕ್ಷದ ಸದಸ್ಯರು ಕೇಳಿದಂಥ ಪ್ರಶ್ನೆಗೆ

ಉತ್ತರವನ್ನು ಕೊಡಬಹುದು ಅಥವಾ ಬಿಡಬಹುದು, ನಾನೇನು ಮಾಡಲಿ ಎಂದು ನಿಸ್ಸಹಾಯಕವಾದಂಥ ಮಾತನ್ನು ಹೇಳಿದ್ದೀರಿ. ತಾವುಗಳು ದಯಮಾಡಿ ಸರಕಾರಕ್ಕೆ ಆದೇಶ ಮಾಡಬೇಕು. ಮಾನ್ಯ ಸದಸ್ಯರುಗಳು ಕೇಳಿದಂಥ ಸಮಂಜಸವಾದ ಪ್ರಶ್ನೆಗಳಿಗೆ ಸರಕಾರದವರು ಉತ್ತರ ಕೊಡುವಂತೆ ತಾವುಗಳು ಆದೇಶ ಕೊಡಬೇಕು.

ಅಧ್ಯಕ್ಷರು:- ದಯವಿಟ್ಟು ಕೇಳಿ. ನಾನು ಆದೇಶ ಕೊಡುವುದಕ್ಕೆ ಈ ರೂಲ್ಸ್ ಪ್ರಕಾರ ಆಗುವುದಿಲ್ಲ. ನಮ್ಮಲ್ಲಿ ಜೀರೋ ಹವರ್ ಎನ್ನುವುದು ಇಲ್ಲ. ಕನ್‌ವೆನ್‌ಶನ್ ಮೂಲಕ ಅತಿ ಜರೂರಾದ ವಿಷಯಗಳನ್ನು ಆಗಾಗ ತೆಗೆದುಕೊಂಡು ಸದಸ್ಯರ ಒಂದು ಅನುಕೂಲಕ್ಕೋಸ್ಕರ ಮಾಡುತ್ತಾ ಇದ್ದೇವೆ. ರೂಲ್ಸ್‌ನಲ್ಲಿ ಜೀರೋ ಹವರ್ ವಿಚಾರ ಇದ್ದರೆ ತಾವುಗಳು ತೆಗೆದು ತೋರಿಸಿ. 351 ನಲ್ಲಿ ಏನಿದೆ ಆಗಾಗ ಅತೀ ಜರೂರಾದ ವಿಷಯವಿದ್ದರೆ ಅದನ್ನು ಸರಕಾರದ ಗಮನಕ್ಕೆ ತರಬಹುದು ಎಂದು ಇದೆ. ಅದನ್ನು ಬಿಟ್ಟರೆ ಜೀರೋ ಹವರ್ ಎಂದು ಎಲ್ಲಿಯೂ ಇಲ್ಲ. ನಿಮ್ಮ ಅನುಕೂಲಕ್ಕಾಗಿ ಒಂದು ಕನ್‌ವೆನ್‌ಶಷನ್‌ನ್ನು ಮಾಡಿಕೊಂಡು ಬಂದಿದ್ದೇವೆ. ಅದನ್ನು ತಾವುಗಳು ಹಕ್ಕುಬಾಧ್ಯತೆ ಎಂದು ಮಾಡಿಕೊಂಡರೆ ಹೇಗೆ? ಒಂದು ಕೆಲಸ ಮಾಡಿ... ನಾವು ರೂಲ್ಸ್ ಕಮಿಟಿಯ ಮೀಟಿಂಗ್‌ನ್ನು ಕರೆದಿದ್ದೇನೆ. ಸಮಿತಿಯ ಮುಂದೆ ಈ ವಿಚಾರವನ್ನು ಇಡುತ್ತೇನೆ. ಅವರು ಜೀರೋ ಹವರ್ ಇಟ್ಟುಕೊಳ್ಳೋಣ ಅಂದರೆ ಅದಕ್ಕೆ ಒಂದು ಸಪರೇಟ್ ನಂಬರ್‌ನ್ನು ಕೊಡೋಣ. ಅಥವಾ ಅದನ್ನು ಅಬಾಲಿಷ್ ಮಾಡೋಣ ಎಂದು ತೀರ್ಮಾನ ಮಾಡಿದರೆ ಅದನ್ನು ಅಬಾಲಿಷ್ ಮಾಡೋಣ.

ಶ್ರೀ ಡಿ.ಎ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ನಮ್ಮ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ಸಂಪ್ರದಾಯಗಳು ಬಹಳ ಮಹತ್ವದ ಪಾತ್ರವನ್ನು ವಹಿಸುತ್ತೇವೆ. ಹಿಂದಿನಿಂದಲೂ ನಡೆದುಕೊಂಡು ಬಂದ ರೀತಿರಿವಾಜುಗಳು ಇರುತ್ತವೆ.

Mr. Speaker:- T hat is called mentioning of the subject. ಇದು ಲೋಕಸಭೆಯಲ್ಲಿದೆ. ಇಲ್ಲಿಯೂ ಅಷ್ಟೆ. ತಾವುಗಳು ಮೆನ್‌ಶನ್ ಮಾಡಬಹುದು. ಸರಕಾರದವರ ಉತ್ತರ ರೆಡಿಯಾಗಿದ್ದರೆ ಉತ್ತರ ಹೇಳಬಹುದು.

ಶ್ರೀ ಡಿ.ಎ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ನಾನು ಇವೊತ್ತು ಒಂದು ಸಣ್ಣ ಸಂಗತಿಯನ್ನು ಹೇಳಬಯಸುತ್ತೇನೆ. ಇವೊತ್ತು ವಿಚಾರ ಪ್ರಸ್ತಾಪ ಮಾಡಿದ್ದನ್ನು ಬೇಡ ಎಂದು ಹೇಳುವ ತೀರ್ಮಾನಕ್ಕೆ ಬಂದಿದ್ದೇವೆ. ಇಂಥ ಸಂಗತಿಗಳನ್ನು ಪ್ರಸ್ತಾಪ ಮಾಡಿ ಅದಕ್ಕೆ ಯಾವುದೇ ಪರಿಹಾರ ಸಿಗದಿದ್ದರೆ, ಆ ಭ್ರಷ್ಟಾಚಾರಿಗೆ ಪರೋಕ್ಷವಾಗಿ ಇನ್ನಷ್ಟು ಕುಮ್ಮಕ್ಕು ಸಿಗುತ್ತದೆ. ಅವನು ತನ್ನ ಕೆಲಸಕಾರ್ಯಗಳನ್ನು ಮುಂದುವರಿಸುವಂತಾಗಬಾರದು.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಹಿಂದೆ ನಾವು ಮಂತ್ರಿಯಾಗಿ ಕೆಲಸ ಮಾಡಿದ್ದೇವೆ, ಅವರು ವಿರಕೋಧಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ. ಜೀರೋ ಹವರ್ ರೂಲ್ಸ್ ನಲ್ಲಿಲ್ಲ, ಆದರೂ ತಾವು ಅಲೋ ಮಾಡುತ್ತೀರಿ ಎಂಬುದು ಎಲ್ಲರಿಗೂ ಗೊತ್ತಿದೆ. ಹಿಂದೆ ಇವರುಗಳೇ ಎಲ್ಲಿ ಮಂತ್ರಿಗಳು? ಉತ್ತರ ಏಕೆ ಕೊಟ್ಟಿಲ್ಲ ಎಂದು ಪ್ರಶ್ನಿಸಿ

ನಮ್ಮಿಂದ ಕರೆಸಿ ಉತ್ತರವನ್ನು ತೆಗೆದುಕೊಂಡಿದ್ದಾರೆ. ಇಲ್ಲಿ ನಡೆದಂಥ ಘಟನೆಗಳನ್ನು ನಾನು ಹೇಳುತ್ತಿದ್ದೇನೆ ಎಲ್ಲರನ್ನೂ ಬೇಕಾದರೆ ಕೇಳಿಕೊಳ್ಳಿ. ವಿಷಯವನ್ನು ನಾವು ಮೊದಲೇ ಮಂತ್ರಿಗಳಿಗೆ ತಿಳಿಸಬೇಕು. ಕೆಲವರು ಕೂಡಲೇ ಕೆಲವರು ಒಂದೆರಡು ದಿವಸ ತೆಗೆದುಕೊಂಡ ಮೇಲೆ ಉತ್ತರವನ್ನು ಕೊಟ್ಟಿದ್ದಾರೆ. ನಾವು ಎರಡೂ ಸದನಗಳಲ್ಲಿ ವಿಷಯ ಪ್ರಸ್ತಾವನೆಗೆ ಉತ್ತರವನ್ನು ಕೊಟ್ಟಿದ್ದೇವೆ. ಇದು ನಡೆದಂಥ ವಿಚಾರ.

ಅಧ್ಯಕ್ಷರು:- ಮೊದಲು ನಡೆದಿದೆ. ಇಲ್ಲಿ ಶುಗರ್ ಫ್ಯಾಕ್ಟರೀಸ್ ಅರಿಯರ್ಸ್ ಬಗ್ಗೆ ಮಾನ್ಯ ಸದಸ್ಯರುಗಳು ವಿಷಯಗಳನ್ನು ಕಳುಹಿಸಿದ್ದೀರಿ. ಇನ್ನೂ ಅವರಿಂದ ಉತ್ತರ ಬಂದಿಲ್ಲ. ಬಂದ ಮೇಲೆ ತೆಗೆದುಕೊಳ್ಳೋಣ ಅಂದರೆ, ಇವರು ಇವೊತ್ತೇ ಉತ್ತರ ಬೇಕೆಂದು ಹೇಳಿದರೆ ನಾನೇನು ಮಾಡಲಿ? ಹೀಗೆ ಉತ್ತರ ಬಂದಮೇಲೆ ನಾವು ತೆಗೆದುಕೊಂಡರೆ ನಿಮಗೂ ಕೂಡ ಅನುಕೂಲವಾಗುತ್ತದೆಯಲ್ಲವೇ? ಅದನ್ನು ಬಿಟ್ಟು ಇವೊತ್ತೇ ನನಗೆ ಅರ್ಜೆಂಟ್ ಇದೆ, ಪ್ರಸ್ತಾಪ ಮಾಡುತ್ತೇನೆ ಅಂದರೆ ಮಾಡಿ ಎಂದು ನಾನು ಹೇಳುತ್ತೇನೆ. ಉತ್ತರ ಕೊಡದಿದ್ದರೂ ಪರರಾಗಿಲ್ಲ ಪ್ರಸ್ತಾಪ ಮಾಡುತ್ತೇವೆಂದೂ ಕೂಡ ಹೇಳುತ್ತಾರೆ. ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಅವರನ್ನು ಕರೆಸೋಣ. ಶುಗರ್ ಫ್ಯಾಕ್ಟರಿಯ ಅರಿಯರ್ಸ್ ಬಗ್ಗೆ ತಾವೇನು ರೈಸ್ ಮಾಡಿದ್ದಿರೊ ಅದನ್ನು ಇವೊತ್ತು ಸಾಯಂಕಾಲದೊಳಗೆ ಮಂತ್ರಿಗಳವರಿಗೆ ಕಳುಹಿಸಿಕೊಡುತ್ತೇನೆ. ಅದನ್ನು ಸೋಮವಾರ ಮಂಗಳವಾರ ಆದಿಯಾಗಿ ನೆಕ್ಸ್ಟ್‌ವೀಕ್‌ನಲ್ಲಿ ತೆಗೆದುಕೊಳ್ಳೋಣ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಮಾನ್ಯ ಅಧ್ಯಕ್ಷರೇ, ನಮ್ಮ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕುಂತೂರು ಶುಗರ್ ಫ್ಯಾಕ್ಟರಿ ಇದೆ. ಅಲ್ಲಿ ಕಳೆದ ಸುಮಾರು ಎರಡು ವರ್ಷಗಳಿಂದ ರೈತರಿಗೆ 6-7 ಕೋಟಿ ರೂಪಾಯಿಗಳಷ್ಟು ಬಾಕಿ ರೈತರಿಗೆ ಬರಬೇಕಾಗಿದೆ. ಅದನ್ನು ಕೊಟ್ಟಿಲ್ಲ. ಆ ಕಾರ್ಖಾನೆಗೆ ಮಾಲೀಕರು ಯಾರು ಎಂದು ಗೊತ್ತಿಲ್ಲ, ಕೋರ್ಟ್ ಆದೇಶ ಬಂದು ಅಲ್ಲಿರುವ ಸ್ಟಾಕ್‌ನ್ನು ವಿಲೇವಾರಿ ಮಾಡಿ ರೈತರಿಗೆ ಹಣ ಕೊಡಿಸಿ ಅಂದರೆ ಇನ್ನೂ ರೈತರಿಗೆ ಹಣ ಕೊಡಿಸುವ ವ್ಯವಸ್ಥೆ ಆಗಿಲ್ಲ.

ನಮ್ಮ ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ. ಅವರಾದರೂ ಗಮನಹರಿಸಿ ಆದಷ್ಟು ಬೇಗ ರೈತರಿಗೆ ಕೊಡಿಸತಕ್ಕಂತಹ ವ್ಯವಸ್ಥೆ ಮಾಡಬೇಕು.

ಶ್ರೀ ಜಿ. ರಾಜುಗೌಡ (ಕೃಷಿ ಉತ್ಪನ್ನ ಸಂಸ್ಕರಣೆ ಸಚಿವರು):- ಮಾನ್ಯ ಅಧ್ಯಕ್ಷರೇ, ಕಬ್ಬು ಸರಬರಾಜು ಮಾಡಿದವರಿಗೆ ದಾಸ್ತಾನು ಬಿಟ್ಟು ಉಳಿದದ್ದನ್ನು ಹರಾಜು ಮಾಡಬೇಕೆಂದು ತೀರ್ಮಾನವಾಗಿದೆ. 15ನೇ ತಾರೀಖು ಹರಾಜು ಮಾಡುತ್ತಿದ್ದೇವೆ.

ಅಧ್ಯಕ್ಷರು:- ಇಲ್ಲಿಗೆ ಶೂನ್ಯ ವೇಳೆ ಮುಕ್ತಾಯವಾಯಿತು.

ಈಗ ನಿಲುವಳಿ ಸೂಚನೆ ನೀಡಿರುವುದರ ಬಗ್ಗೆ ನಾನು ಹೇಳಿಬಿಡುತ್ತೇನೆ. It can be taken up in a different form during the next week. ಜೊತೆಗೆ ಶ್ರೀ ವೈ.ಕೆ. ರಾಮಯ್ಯನವರು ಕಳುಹಿಸಿಕೊಟ್ಟಿದ್ದಾರೆ; ರೂಲ್ 69 ಕೆಳಗಡೆ. ಶ್ರೀ ಸಿಂಧ್ಯಾರವರ ಪಕ್ಷದವರೂ ಕಳುಹಿಸಿಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದವರ ಪಕ್ಷದವರೂ ಕಳುಹಿಸಿಕೊಟ್ಟಿದ್ದಾರೆ.

ಆಗುವುದಿಲ್ಲವೆಂದು ನಾನು ಹೇಳಿದ ಮೇಲೆ, I will allow in some other form, but not through adjournment motion. ನಾನು ಏನು ಹೇಳಿದೆ ಆಗಲೀ? ನನಗೆ ಒಂದು ಗಂಟೆ ಟೈಂ ಕೊಡಿ, ನನ್ನ ಮೈಂಡ್ ಅಪ್ಲೈ ಮಾಡುತ್ತೇನೆ ಅಂತ. ಒಬ್ಬರು ನಿಲುವಳಿ ಸೂಚನೆ ಮೇಲೆ ಮಾತನಾಡುವುದು, ಇನ್ನೊಬ್ಬರು 69 ಕೆಳಗೆ ಮಾತನಾಡುವುದು - ಇದು ಹೇಗೆ

ವಿಷಯ(ಇ) ನಿಲುವಳಿ ಸೂಚನೆಗೆ ಅನುಮತಿಗೆ ಮಂಡನೆ- ಬೆಂಗಳೂರು ಸುತ್ತಮುತ್ತ ನಗರ ಸಭೆಗಳಲ್ಲಿ ಲೋಕಾಯುಕ್ತ ಧಾಳಿಯಿಂದ ಬೆಳಕಿಗೆ ಬಂದಿರುವ ಪ್ರಕರಣಗಳ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಇವತ್ತು ನಾನು ನಿಲುವಳಿ ಸೂಚನೆ ಮೂಲಕ ಬಹಳ ಪ್ರಾಮುಖ್ಯವಾದ ವಿಷಯವನ್ನು ಮಂಡನೆ ಮಾಡಿದ್ದೇನೆ. ಅದನ್ನು ಅದೇ ರೂಪದಲ್ಲಿ ಒಪ್ಪುವಿರೋ ಇಲ್ಲವೋ ಎಂಬುದು ತಮ್ಮ ವಿವೇಚನೆಗೆ ಬಿಟ್ಟದ್ದು. ಆದರೆ ನಿಲುವಳಿ ಸೂಚನೆ ಬಗ್ಗೆ ಇವತ್ತೇನು ಸಿಎಂಸಿಗಳಲ್ಲಿ ಭ್ರಷ್ಟಾಚಾರ ನಡೆದಿದೆ, ಲೋಕಾಯುಕ್ತರು ಧಾಳಿ ಮಾಡಿದ್ದು, ನಾನು ಪ್ರಾಥಮಿಕವಾಗಿ ಕೆಲವು ವಿಷಯಗಳನ್ನು ಇಲ್ಲಿ ಮಂಡನೆ ಮಾಡುತ್ತೇನೆ.

Mr. Speaker: I will allow, but not through adjournment motion, but in some other form, I can understand the seriousness of the subject.

ಶ್ರೀ ಜಗದೀಶ್ ಶೆಟ್ಟರ್:- ಈಗ ತೀರ್ಮಾನ ಕೊಡುವಂಥದ್ದಲ್ಲ, ನನ್ನ ಕಡೆಯಿಂದ ಪೂರ್ವ ಭಾವಿ ಹಿಯರಿಂಗ್ ಆದಮೇಲೆ ಯಾವ ರೂಪದಲ್ಲಿ ಕೊಡುವಿರೆಂದು ತೀರ್ಮಾನ ಕೊಡಬಹುದು.

ಅಧ್ಯಕ್ಷರು:- ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೇ, ಇವತ್ತು ನಿಲುವಳಿ ಸೂಚನೆ ಮೂಲಕ ಬಹಳ ಪ್ರಾಮುಖ್ಯವಾದ ವಿಷಯವನ್ನು ನಾನು ಪ್ರಸ್ತಾಪ ಮಾಡಬಯಸುತ್ತೇನೆ. ಬೆಂಗಳೂರು ಸುತ್ತಮುತ್ತಲಿನ ನಗರಸಭೆಗಳ ಏನಿವೆ ಅವುಗಳಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ ಹಗರಣಗಳು ಈಗ ಹೊರಕ್ಕೆ ಬರುತ್ತಿವೆ. ಇದಕ್ಕೆ ಮುಂಚಿತವಾಗಿ ಮುಖ್ಯಮಂತ್ರಿಗಳ ಕಡೆಗೆ ಸಾಕಷ್ಟು ದೂರುಗಳು ಹೋದುವು. ಏನ್ ಕ್ವೈರಿ ಅಂತ ಫಿಕ್ಸ್ ಮಾಡಿದರು. ಅದರೇನೂ ಆಗಲಿಲ್ಲ. ಈ ಭ್ರಷ್ಟಾಚಾರ ಹಗರಣದಲ್ಲಿ 200 ಕೋಟಿ ಸೇರಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ ನನಗನ್ನಿಸುತ್ತದೆ; ಹಿಂದೆ ರಾಷ್ಟ್ರದಲ್ಲಿ ಬೋಫೊಸ್‌ನ ಹಗರಣ ಅಂತ 67 ಕೋಟಿ ರೂ.ಗಳದ್ದು ಆಯಿತು, ಒಂದು ಕೇಂದ್ರ ಸರ್ಕಾರವೇ ಹೊಯಿತು. ಬೋಫೋರ್ಸ್ ಇಶ್ಯೂ ಮೇಲೆ ಒಂದು ಮಹಾಚುನಾವಣೆಯೂ ಆಯಿತು. ಇನ್ನು ಬಿಹಾರದಲ್ಲಿ ನಡೆದದ್ದು 800 ಕೋಟಿಗಳದ್ದು.

(ಗೊಂದಲ)

ಅಧ್ಯಕ್ಷರು:- ನಿಮ್ಮನ್ನು ಕರೆದಿಲ್ಲ, ವಿರೋಧಪಕ್ಷದವರು ಮಾತನಾಡುತ್ತಾರೆ, ಗೌರವ ಕೊಟ್ಟು ಸುಮ್ಮನಿರಿ. ಆಮೇಲೆ ನೀವೂ ಮಾತನಾಡಿ.